**ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 1113 / 2017**

| | | |
|---|---|---|
| ಸಾಕ್ಷಿಯ ಹೆಸರಃ | ಅನೀಲಕುಮಾರ | ಪ್ರಾಸಾಃ 02 |
| ತಂದೆ/ಗಂಡನ ಹೆಸರುಃ | ಅಣ್ಣಪ್ಪ | ಚಾಸಾಃ 07 |
| ವಯಸ್ಸುಃ | 36 ವರ್ಷ | ದಿಃ 23.08.2019 |
| ಉದ್ಯೋಗಃ | ಅಬಕಾರಿ ರಕ್ಷಕ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಹಾಪುರ | |

**ಮುಖ್ಯ ವಿಚಾರಣೆಃ** ಮಾನ್ಯ ಹಿ.ಸ.ಸ.ಅ.ರಿಂದಃ

ನಾನು 2008 ರಿಂದ ಇಲ್ಲಿಯವರೆಗೆ ಅಬಕಾರಿ ರಕ್ಷಕ ಎಂದು ಉಪವಿಭಾಗ ಶಹಾಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 25.03.2017 ರಂದು ಮದ್ಯಾಹ್ನ 4-00 ಗಂಟೆಗೆ ನಾನು ಚಾಸಾ-8, 3, 4 ಮತ್ತು 6 ರವರು ಹಾಗೂ ಪಂಚರಾದ ಚಾಸಾ-1 ಮತ್ತು 2 ರವರೊಂದಿಗೆ ಗುಂಜನೂರು ಕ್ರಾಸ್ ಹತ್ತಿರ ಕಾಯುತ್ತಾ ನಿಂತಾಗ ಚಾಸಾ-3 ರವರಿಗೆ ದೂರವಾಣಿ ಮುಖಾಂತರ ಮಾಹಿತಿ ಬಂದಿರುತ್ತದೆ. ನಂದೇಪಲ್ಲಿ ಬಸ್ ನಿಲ್ದಾಣದ ಪಕ್ಕದಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಆಗುತ್ತಿದೆ ಎಂದು ತಿಳಿದಿದ್ದು ನಾವೆಲ್ಲರೂ ಸೇರಿ ಸ್ಥಳಕ್ಕೆ ಹೋಗಿರುತ್ತೇವೆ. ನಾವು ನೋಡಿದಗಾ ಒಬ್ಬ ವ್ಯಕ್ತಿ ಬಸ್ ನಿಲ್ದಾಣದ ಬಳಿ ಸೇಂದಿ ಮಾರಾಟ ಮಾಡುವುದು ಕಂಡುಬಂದಿರುತ್ತದೆ. ಸ್ಥಳೀಯರನ್ನು ಪಂಚರಾಗಿ ಸಹಕರಿಸಲು ಕೋರಿದ್ದು ಅವರು ನಿರಾಕರಿಸಿರುತ್ತಾರೆ. ನಮ್ಮ ಜೊತೆಗೆ ಕರೆದುಕೊಂಡು ಹೋದ ಚಾಸಾ-1 ಮತ್ತು 2 ರವರನ್ನು ಪಂಚರನ್ನಾಗಿ ತೆಗೆದುಕೊಂಡು ದಾಳಿ ಮಾಡಿರುತ್ತೇವೆ. ಶೋಧನಾ ಪತ್ರ ತಯಾರಿಸಿ ಶೋಧನೆ ಮಾಡಿರುತ್ತೇವೆ. 10 ಲೀಟರನ 3 ಪ್ಲಾಸ್ಟಿಕ ಕ್ಯಾರಿ ಬ್ಯಾಗಗಳಲ್ಲಿ ಸೇಂದಿ ಇರುವುದು ಹಾಗೂ 2 ಲೀಟರನ 3 ಬ್ಯಾಗ್‌ಗಳಲ್ಲಿ ಸೇಂದಿ ಇದಿದ್ದು ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ತನ್ನ ಹೆಸರು ಸಿದ್ಯಾ ತಂದೆ ಗಂಟ್ಯಾ ಎಂದು ತಿಳಿಸಿರುತ್ತಾರೆ. ಸದರಿ ಮುದ್ದೆ ಮಾಲುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು ಅದರಲ್ಲಿ ರಸಾಯನಿಕ ಪರೀಕ್ಷೆಗಾಗಿ 1 ಲೀಟರನ 3 ಬಾಟಲಿಗಳಲ್ಲಿ ಸೇಂದಿಯನ್ನು ಮಾದರಿ ತೆಗೆದು ಬಟ್ಟೆ ಸುತ್ತಿ ದಾರ ಕಟ್ಟಿ ಸೀಲು ಮಾಡಿರುತ್ತೇವೆ. ಪಂಚನಾಮೆಯನ್ನು ಮದ್ಯಾಹ್ನ 3-00 ರಿಂದ 4-00 ರ ವರೆಗೆ ಮಾಡಿರುತ್ತೇವೆ. ನಂತರ ಮುದ್ದೆ ಮಾಲು ಮತ್ತು ಆರೋಪಿಯನ್ನು

ಕಚೇರಿಗೆ ತೆಗೆದುಕೊಂಡು ಹೋಗಿರುತ್ತೇವೆ. ಚಾಸಾ-3 ರವರು ಮುಂದಿನ ಕ್ರಮ ಜರುಗಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ಅನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎನ್.ಬಿ.ಎಸ್. ವಕೀಲರಿಂದಃ</u>**

ಪಂಚರು ಶಹಾಪುರದವರು ಆಗಿರುತ್ತಾರೆ ಎಂದರೆ ಸರಿ. ನಾನು ಶಹಾಪುರ ವಿಭಾದಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಪಂಚರನ್ನು ಶಹಾಪುರದಿಂದ ಕರೆದುಕೊಂಡು ಹೋಗಿರುತ್ತೇವೆ. ನಾವು ಬರುವಾಗ ಪಂಚರು ಶಹಾಪುರ ಬಸ್ ನಿಲ್ದಾಣದ ಹತ್ತಿರ ನಿಂತಿದ್ದರು. ನಾನು ಅವರನ್ನು ಕರೆದಿರುತ್ತೇನೆ. ನಾವು ಸ್ಥಳಕ್ಕೆ ಹೋಗಿ ದಾಳಿ ಮಾಡಿದಾಗ ಅಲ್ಲಿ 20-30 ಜನ ಇರಬಹುದು. ಆರೋಪಿಯನ್ನು ನಾನು ಹಿಡಿದಿರುತ್ತೇನೆ. ಸ್ಥಳದಲ್ಲಿ ಬೇರೆಯವರನ್ನು ವಿಚಾರಣೆ ಮಾಡಿರುವುದಿಲ್ಲ. ಆರೋಪಿಯ ಬಳಿ ಗ್ಲಾಸುಗಳು ಇರಲಿಲ್ಲ. ಅವರ ಬಳಿಯಿಂದ ಹಣ ಜಪ್ತಿ ಮಾಡಿಲ್ಲ. ಸ್ಥಳೀಯರನ್ನು ಪಂಚರಾಗಲು ಕೇಳಿದ್ದು ಅವರು ನಿರಾಕರಿಸಿದ್ದ ವಿಷಯವನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ಕಪಕ್ಕದಲ್ಲಿ ಸಾಕಷ್ಟು ಹೋಟೇಲ್‌ಗಳು ಇರುತ್ತವೆ ಎಂದರೆ ಸರಿ. ನಾನು ಚಾಸಾ-3 ರವರಿಗೆ ಸ್ಥಳದಲ್ಲಿಯೇ ಹೇಳಿಕೆ ನೀಡಿರುತ್ತೇನೆ. ಕ್ಯಾರಿ ಬ್ಯಾಗಗಳು ಬಿಳಿಯ ಬಣ್ಣದ್ದಾಗಿರುತ್ತವೆ. ಸೇಂದಿಯನ್ನು ಅಳತೆ ಮಾಡಿಲ್ಲ ಅಂದಾಜು ನಮೂದಿಸಿರುತ್ತೇವೆ.

ಚಾಸಾ-3 ರವರಿಗೆ ಮಾಹಿತಿ ಬಂದದ್ದು, ನಾವು ಸಿಬ್ಬಂದಿ ಮತ್ತು ಪಂಚರೊಂದಿಗೆ ನಂದೇಪಲಿ ಬಸ್ ನಿಲ್ದಾಣದ ಹತ್ತಿರ ಹೋಗಿದ್ದು ಆರೋಪಿ ಪ್ಲಾಸ್ಟಿಕ ಚೀಲಗಳಲ್ಲಿ ಸೇಂದಿಯನ್ನು ಮಾರಾಟ ಮಾಡುತ್ತಿದ್ದುದು ನಾವು ದಾಳಿ ಮಾಡಿ ಆರೋಪಿಯನ್ನು ಹಿಡಿದಿದ್ದು ಪ್ಲಾಸ್ಟಿಕ ಕ್ಯಾರಿ ಬ್ಯಾಗಗಳನ್ನು ಪರಿಶೀಲನೆ ಮಾಡಿದ್ದು ಮುದ್ದೆ ಮಾಲುಗಳನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡಿದ್ದು ಸುಳ್ಳು ಎಂದರೆ ಸರಿಯಲ್ಲ. ದಾಖಲಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.